**ಕರ್ನಾಟಕ ಸರ್ಕಾರ**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: DTE-ACT0GRT2/21/2023

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆರಸ್ತೆ, ಬೆಂಗಳೂರು – 560001,
ದಿನಾಂಕ: 08.08.2023.

**ನೆನಪೋಲೆ**

**ವಿಷಯ:-** ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ನಿಯಮಾನುಸಾರ ವರ್ಷವಾರು ಸರ್ಕಾರಕ್ಕೆ ಜಮೆ ಮಾಡದೇ ಉಳಿಸಿಕೊಂಡಿರುವ ಬೋಧನಾ ಶುಲ್ಕ ಹಾಗೂ ಅಭಿವೃದ್ಧಿ ಶುಲ್ಕವನ್ನು ಕೂಡಲೇ ಸರ್ಕಾರಕ್ಕೆ ಜಮೆ ಮಾಡುವ ಬಗ್ಗೆ.

**ಉಲ್ಲೇಖ:-**

1. ಮಹಾಲೇಖಪಾಲರ ಲೆಕ್ಕಾಧಿಕಾರಿಗಳ ಆಡಿಟ್ ಪ್ಯಾರ Pr-AG (Audit-I)/AMG-III/DP Cell/2021-22, ದಿನಾಂಕ:02.11.2021.
2. ಈ ಕಛೇರಿ ಜ್ಞಾಪನ ಪತ್ರ ಸಂಖ್ಯೆ: ಸಿಟಿಇ 21 ಡಿವಿಪಿ (1) 2021, ದಿನಾಂಕ:20.12.2021.
3. ಈ ಕಛೇರಿ ಅನಧಿಕೃತ ಟಿಪ್ಪಣಿ ಪತ್ರ ಸಂಖ್ಯೆ:ಡಿಟಿಇ 02 ಆರ್‌ಐಪಿ (1) 2023, ದಿನಾಂಕ:20.07.2023.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಲ್ಲಿ ಅನುದಾನಿತ ಪಾಲಿಟೆಕ್ನಿಕ್ ಪ್ರಾಂಶುಪಾಲರುಗಳು ಸಲ್ಲಿಸಿರುವ 2010 ರಿಂದ 2020ರವರೆಗಿನ ಮಾಹಿತಿ ಹಾಗೂ ದಾಖಲೆಗಳ ಅನುಸಾರ 25 ಸಂಸ್ಥೆಗಳು ವರ್ಷವಾರು ನಿಯಮಾನುಸಾರ ಬೋಧನಾ ಶುಲ್ಕ-ಅಭಿವೃದ್ಧಿ ಶುಲ್ಕಗಳನ್ನು ರೂ.3,38,39,704/-ಗಳನ್ನು ಸರ್ಕಾರಕ್ಕೆ ಜಮೆ ಮಾಡದೆ ಬಾಕಿ ಉಳಿಸಿಕೊಂಡಿರುವ ಬಗ್ಗೆ ಮಹಾಲೇಖಪಾಲರು ವರದಿ ನೀಡಿರುತ್ತಾರೆ.

ಮಹಾಲೇಖಪಾಲರ ಲೆಕ್ಕಾಧಿಕಾರಿಗಳ ವರದಿನ್ವಯ ಉಲ್ಲೇಖ (2) ರ ಜ್ಞಾಪನ ಪತ್ರದಲ್ಲಿ ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳು ದಿನಾಂಕ:30.12.2021 ರೊಳಗೆ ಬಾಕಿ ಉಳಿಸಿಕೊಂಡಿರುವ ಬೋಧನಾ ಶುಲ್ಕ-ಅಭಿವೃದ್ಧಿ ಶುಲ್ಕವನ್ನು ಸರ್ಕಾರಕ್ಕೆ ಜಮೆ ಮಾಡಿ, ಚಲನ್ ಅನ್ನು ಆಯುಕ್ತಾಲಯಕ್ಕೆ ಸಲ್ಲಿಸಲು ಸೂಚಿಸಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ)

ಆದರೆ, ಇದುವರೆಗೂ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ನಿಯಮಾನುಸಾರ ವರ್ಷವಾರು ಶೇಕಡಾ 50% ಬೋಧನಾ ಶುಲ್ಕ ಮತ್ತು ಅಭಿವೃದ್ಧಿ ಶುಲ್ಕವನ್ನು ಸರ್ಕಾರಕ್ಕೆ ಜಮೆ ಮಾಡಿರುವ ವಿವರಗಳನ್ನು ಸಲ್ಲಿಸಿರುವುದಿಲ್ಲ. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಕೂಡಲೇ ಬಾಕಿ ಉಳಿಸಿಕೊಂಡಿರುವ ಬೋಧನಾ ಶುಲ್ಕ ಮತ್ತು ಅಭಿವೃದ್ಧಿ ಶುಲ್ಕವನ್ನು ಸರ್ಕಾರಕ್ಕೆ ಜಮೆ ಮಾಡಿ, ಚಲನ್ ಅನ್ನು ಆಯುಕ್ತಾಲಯದ ಜಿಆರ್‌ಟಿ ವಿಭಾಗಕ್ಕೆ ದಿನಾಂಕ:21.08.2023ರೊಳಗೆ ತಪ್ಪದೆ ದಾಖಲೆಗಳೊಂದಿಗೆ ವರದಿ ಸಲ್ಲಿಸಲು ಎಲ್ಲಾ ಅನುದಾನಿತ ಪಾಲಿಟೆಕ್ನಿಕ್ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಸಲಾಗಿದೆ.

**ಜಂಟಿ ನಿರ್ದೇಶಕರು (ಆಡಳಿತ)**
**ತಾಂತ್ರಿಕ ಶಿಕ್ಷಣ ಇಲಾಖೆ**

**ಇವರಿಗೆ:-**

1. 44 ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ.
2. ತಾಂತ್ರಿಕ ಶಿಕ್ಷಣ ಕೇಂದ್ರ ಕಛೇರಿ ಇ-ಗವರ್ನೆನ್ಸ್ ವಿಭಾಗ- ಮಾಹಿತಿಗಾಗಿ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು.